# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
## ಬ್ಯಾಟರಾಯನಪುರ ಉಪ ವಿಭಾಗ, ವಾರ್ಡ್ ನಂ. 06(ಥಣಿಸಂದ್ರ)
## ವಾರ್ಡ್‌ಸಮಿತಿ ಸಭೆ, ದಿನಾಂಕ: 05.12.2020 ರ
## ಸಭಾ ನಡುವಳಿ

ದಿನಾಂಕ: 05.12.2020 ರಂದು ಬೆಳ್ಳಿಗೆ 11.00 ಗಂಟೆಗೆ ವಾರ್ಡ್ ನಂ.06 ಥಣಿಸಂದ್ರ ವ್ಯಾಪ್ತಿಯಲ್ಲಿ ವಾರ್ಡ್ ಸಮಿತಿಯ ಸಭೆಯನ್ನು ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಹೆಗಡೆನಗರ, 2ನೇ ಮುಖ್ಯರಸ್ತೆ, 4ನೇ ಅಡ್ಡರಸ್ತೆ ಇಲ್ಲಿ ಬಿಬಿಎಂಪಿ ಸಮುದಾಯ ಭವನ ಕಟ್ಟಡದಲ್ಲಿ ನೆಡೆದ ವಾರ್ಡ್ ಸಮಿತಿಯ ಸಭೆಯ ನಡುವಳಿಗಳು

| ಕ್ರ.ಸಂ | ಸಭೆಗೆ ಹಾಜರಾಗಿರುವ ಅಧಿಕಾರಿಗಳು | ಹುದ್ದೆ |
|---|---|---|
| 1 | ಶ್ರೀ ಬಿ.ಎಸ್ ಶ್ರೀಧರ್ | ನೋಡಲ್ ಅಧಿಕಾರಿ, ವಾರ್ಡ್ ನಂ. 06(ಥಣಿಸಂದ್ರ) ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು ಬ್ಯಾಟರಾಯನಪುರ ಉಪ ವಿಭಾಗ |
| 2 | ಶ್ರೀ ಸುರೇಶ್ ದೇವತ್‌ರಾಜ್ | ಸಹಾಯಕ ಅಭಿಯಂತರರು ಹಾಗೂ ಸದಸ್ಯ ಕಾರ್ಯದರ್ಶಿ, ವಾರ್ಡ್ ಸಮಿತಿ, ವಾರ್ಡ್ ನಂ. 06 (ಥಣಿಸಂದ್ರ) |
| 3 | ಶ್ರೀಮತಿ ಡಾ॥ ಕೇಶವಪಾಣಿ | ಆರೋಗ್ಯ ವೈದ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರ, ಹೆಗಡೆನಗರ |
| 4 | ಶ್ರೀಮತಿ ವೇಣುಪ್ರಿಯ ಎಸ್ | ಸಹಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ |
| 5 | ಶ್ರೀ ವಿ. ಪ್ರೇಮ್ ಕುಮಾರ್ | ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ. 06 |
| 6 | ಶ್ರೀ ಜಿತೇಂದ್ರ ರಾವ್ | ಕಂದಾಯ ಪರಿವೀಕ್ಷಕರು, ವಾರ್ಡ್ ನಂ. 06 |
| 7 | ಶ್ರೀ ಮಂಜುನಾಥ್. ಎಸ್ | ಕಿರಿಯ ಆರೋಗ್ಯ ಪರಿವೀಕ್ಷಕರು, |
| 8 | ಶ್ರೀ ವೆಂಕಟೇಶ್ | ಕಂದಾಯ ಪರಿವೀಕ್ಷಕರು, ವಾರ್ಡ್ ನಂ. 06 |

ಶ್ರೀ ಸುರೇಶ್ ದೇವತ್‌ರಾಜ್, ವಾರ್ಡ್ ಸಮಿತಿ ಕಾರ್ಯದರ್ಶಿ ಹಾಗೂ ವಾರ್ಡ್ ಅಭಿಯಂತರರು ವಾರ್ಡ್ ನಂ. 06 ರವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಸಭೆಗೆ ಹಾಜರಾಗಿದ್ದ ವಿವಿಧ ಇಲಾಖೆಯ ಅಧಿಕಾರಿಗಳು, ಹಾಗೂ ವಿವಿಧ ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಹಾಗೂ ಸಾರ್ವಜನಿಕರಿಗೆ ಸ್ವಾಗತಿಸುವ ಮೂಲಕ ಸಭೆಯನ್ನು ಪ್ರಾರಂಭಿಸುತ್ತಾ ವಾರ್ಡ್ ಕಮಿಟಿ ಸಭೆಯಲ್ಲಿ ಚರ್ಚಿಸಬೇಕಾದ ಅಜೆಂಡ ವಿಷಯಗಳ ಬಗ್ಗೆ ತಿಳಿಸಿದರು.

1. **ಕೋವಿಡ್–19ರ ಸಂಬಂಧ ಸೊಂಕು ಹರಡುವುದನ್ನು ತಡೆಗಟ್ಟುವ ಸಂಬಂಧ ತೆಗೆದುಕೊಳ್ಳಬೇಕಾದ ಮುಜಾಗೃತ ಕ್ರಮಗಳ ಬಗ್ಗೆ.** ಡಾ॥ ಕೇಶವಪಾಣಿ ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಕೊರೊನಾ ಸೊಂಕು ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿದ್ದು, ಬಡಾವಣೆ ನಿವಾಸಿಗಳ ಸಂಘದವರು ತಮ್ಮ ತಮ್ಮ ಬಡಾವಣೆಗಳಲ್ಲಿ ಸಾರ್ವಜನಿಕರಿಗೆ ಕೋವಿಡ್–19ರ ಪರೀಕ್ಷೆ ಮಾಡಲು ಸಹಕಾರ ಕೋರಿದರು. ಹಾಗೂ ಸಾರ್ವಜನಿಕರ ಯಾವ ರೀತಿಯಲ್ಲಿ ಮಂಜಾಗೃತ ಕ್ರಮ ವಹಿಸಬೇಕಾಗಿ ಸಭೆಯಲ್ಲಿ ತಿಳಿಸಿದರು, ಶಿವಣ್ಣರವರು ಮಾತನಾಡಿ ದಾಸರಹಳ್ಳಿ ಸುತ್ತಮುತ್ತ ಸಹ ಸಾರ್ವಜನಿಕರಿಗೆ ಅರಿವು ಮೂಡಿಸಲು ಕ್ರಮ ವಹಿಸಲು ಕೋರಿದರು ಹಾಗೂ ಕೆಲವರು ಮಾಸ್ಕ್ ಧರಿಸದೇ ಹಾಗೆ ಓಡಾಡುತ್ತಿದ್ದು, ವಾರ್ಡ್‌ಗೆ ಹೆಚ್ಚಿನ ಮಾರ್ಷಲ್‌ಗಳನ್ನು ನೇಮಕ ಮಾಡಲು ಕೋರಿದರು.
2. **ದಾಸಪ್ಪ, ಸಂಯುಕ್ತ ಗೆಳೆಯರ ಬಳಗ ಹೆಗಡೆನಗರ:** ರವರು ಮಾತನಾಡಿ



Scanned with CamScanner

1. ಸಂಪಿಗೇಹಳ್ಳಿ, ಹೆಣ್ಣೂರು, ಮತ್ತು ಅಮೃತಹಳ್ಳಿ ಪೋಲಿಸ್ ಠಾಣೆಯಿಂದ ಪೋಲಿಸ್ ಅಧಿಕಾರಿಗಳು ಹಾಗೂ ಕಲ್ಯಾಣ ಕಾರ್ಯಕ್ರಮದ ವಿವರದ ಬಗ್ಗೆ ತಿಳಿಯಲು ಕಲ್ಯಾಣ ಶಾಖೆಯ ಅದಿಕಾರಿಗಳು ಹಾಗೂ ಬೆಸ್ಕಾಂ ಇಲಾಖೆಯ ಅಧಿಕಾರಿಗಳು ಸಭೆಗೆ ಹಾಜರಾಗುತ್ತಿಲ್ಲವೆಂದು ತಿಳಿಸಿದರು ಕಾರ್ಯದರ್ಶಿ ರವರು ಮಾತನಾಡಿ ಪ್ರತಿ ಸಭೆಗೂ ಸಹ ಮೀಟಿಂಗ್ ನೋಟಿಸ್ ನೀಡಲಾಗುತ್ತಿದ್ದು, ಸಭೆಗೆ ಗೈರುಹಾಜರಿಯಾಗುತ್ತಿರುವುದಾಗಿ ತಿಳಿಸಿದರು. ಈ ಸಂಬಂಧ ನೋಡೆಲ್ ಅಧಿಕಾರಿಯವರು ಮುಂದಿನ ಸಭೆಗೆ ಎಲ್ಲಾ ಇಲಾಖೆಯ ಅಧಿಕಾರಿಗಳು ಹಾಜರಾಗುವಂತೆ ಕ್ರಮ ವಹಿಸಲು ಸೂಚಿಸಿದರು.
2. ಈ ಸಭೆಯಲ್ಲಿಯೂ ಸಹ ಮಾರುಕಟ್ಟೆಗಾಗಿ ಸೂಕ್ತ ವ್ಯವಸ್ಥೆ ಮಾಡಲು ಹೆಚ್ಚಿನ ಗಮನ ಹರಿಸಿ ಕ್ರಮ ವಹಿಸುವಂಥೆ ಕೋರಿದರು.

3. **ಶ್ರೀ ಸುರೇಶ್ ಮಾಜಿ ಅಧ್ಯಕ್ಷರು, ದಾಸರಹಳ್ಳಿ ಗ್ರಾಮ ಪಂಚಾಯ್ತಿ ಅವಧಿ** : ರವರು ಮಾತನಾಡಿ
   1. ಮಾರುತಿ ಬಡಾವಣೆ, ಕಾವೇರಿ ಬಡಾವಣೆ, ಹಾಗೂ ನಂದನ ರೆಸಿಡೆನ್ಸಿ ಬಡಾವಣೆಗಳಲ್ಲಿ ರಸ್ತೆಗಳು ತುಂಬ ಹಾಳಾಗಿದ್ದು, ಅಭಿವೃದ್ದಿಪಡಿಸುವಂತೆ ಕೋರಿದರು ಇದಕ್ಕೆ ವಾರ್ಡ್ ಸ.ಅ ರವರು ಮಾತನಾಡಿ ಈಗಾಗಲೇ ಸದರಿ ಬಡಾವಣೆಗಳಲ್ಲಿ ಅಭಿವೃದ್ದಿ ಕಾಮಗಾರಿಗಳನ್ನು ಕೈಗೊಳ್ಳಲು ಅನುದಾನ ಮಂಜೂರಾಗಿದ್ದು, ಟೆಂಡರ್ ಪ್ರಕ್ರಿಯೆಯಲ್ಲಿರುತ್ತದೆ. ಟೆಂಡರ್ ಪ್ರಕ್ರಿಯೆ ಮುಗಿದ ಕೂಡಲೇ ಕಾಮಗಾರಿಯನ್ನು ಕೈಗೊಳ್ಳಲು ಕ್ರಮ ವಹಿಸಲಾಗುವುದು ಎಂದು ತಿಳಿಸಿದರು.
4. **ಶ್ರೀಮತಿ ಪೂರ್ಣಿಮಾ ಭುವನೇಶ್ವರಿನಗರ ರವರು ಮಾತನಾಡಿ,** ದಾಸರಹಳ್ಳಿ ಮುಖ್ಯರಸ್ತೆಯಲ್ಲಿ ಸಾರ್ವಜನಿಕರಿಗೆ ಓಡಾಡಲು ತುಂಬ ತೊಂದರೆಯುಂಟಾಗುತ್ತಿದ್ದು, ಪಾದಚಾರಿ ಮಾರ್ಗದ ಒತ್ತುವರಿಯನ್ನು ತೆರವುಗೊಳಿಸುವಂತೆ ಕೋರಿದರು ಹಾಗೂ ಭುವನೇಶ್ವರಿನಗರ 11ನೇ ಅಡ್ಡರಸ್ತೆಯಲ್ಲಿ ರಸೆಯಲ್ಲಿ ಶೆಡ್ ನಿರ್ಮಿಸಲಾಗಿದ್ದು, ಇದನ್ನು ತೆರವುಗೊಳಿಸಲು ಕೋರಿದರು.
5. **ಶ್ರೀನಿವಾಸ್‌ರಾವ್** ರವರು ಮಾತನಾಡಿ
   1. ವಾರ್ಡ್ ವ್ಯಾಪ್ತಿಯಲ್ಲಿ ಪ್ರಗತಿಯಲ್ಲಿರುವ ಕಾಮಗಾರಿಗಳ ವಿವರಗಳನ್ನು ಕೋರಿದರು ಈ ಬಗ್ಗೆ ವಾರ್ಡ್‌ನ ಸ.ಅ ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಪ್ರಾಜೆಕ್ಟ್ ಡಿವಿಜನ್ ವತಿಯಿಂದ ಈಗಾಗಲೇ ಸುಮಾರು 15.00 ಕೋಟಿಗಳ ಅನುದಾನ ಬಿಡುಗಡೆಗೊಂಡು ಗುತ್ತಿಗೆದಾರರಿಗೆ ಕಾರ್ಯದೇಶ ನೀಡಿದ್ದು, ಕಾಮಗಾರಿಗಳನ್ನು ಪ್ರಾರಂಭಿಸಲಾಗಿರುತ್ತದೆ. ಆದರೆ ಸದರಿ ಕಾಮಗಾರಿಗಳ ಕೈಗೊಳ್ಳುವ ಪ್ರದೇಶಗಳಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಯ ವತಿಯಿಂದ ಬಾಕಿ ಇರುವ ಯು.ಜಿ.ಡಿ ಕಾಮಗಾರಿಗಳನ್ನು ಕೂಡಲೇ ಕೈಗೊಂಡು ಪೂರ್ಣಗೊಳಿಸಲು ಕೋರಲಾಗಿದೆ ಎಂದು ಸಭೆಗೆ ತಿಳಿಸಿದರು ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ರೂ. 21.00 ಕೋಟಿ ಸರ್ಕಾರದ ಅನುದಾನದಲ್ಲಿ ವಿವಿಧ ಅಭಿವೃದ್ದಿ ಕಾಮಗಾರಿಗಳು ಮಂಜೂರಾಗಿದ್ದು ಟೆಂಡರ್ ಪ್ರಕ್ರಿಯೆಯಲ್ಲಿದ್ದು, ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡ ತಕ್ಷಣ ಕಾಮಗಾರಿಗಳನ್ನು ಕೈಗೊಳ್ಳಲಾಗುವುದೆಂದು ಸಭೆಗೆ ಎಂದು ತಿಳಿಸಿದರು.
   2. ವಾರ್ಡ್ ನಂ. 06ರ ವಿವಿಧ ಬಡಾವಣೆಗಳಲ್ಲಿ ರಸ್ತೆಗಳು ಹಾಳಾಗಿದ್ದು, ಧೂಳಿನಿಂದ ಧುಷ್ಪರಿಣಾಮವನ್ನು ತಡೆಗಟ್ಟಲು ಮನೆ ಮನೆಗೆ ಒಳಚರಂಡಿ ಸಂಪರ್ಕ ಒದಗಿಸಿ ಕೂಡಲೇ ರಸ್ತೆಗಳಿಗೆ ಡಾಂಬರೀಕರಣ ಮಾಡಲು ಕೋರಿದರು.
   3. ವಾರ್ಡ್ ನಂ. 06ರಲ್ಲಿ ಕಾವೇರಿ ಹಾಗೂ ಒಳಚರಂಡಿಗೆ ಸಂಬಂಧಿಸಿದಂತೆ, ಚರ್ಚಿಸಲು ಬಿ.ಡಬ್ಲ್ಯೂ.ಎಸ್.ಎಸ್.ಬಿ, ಮೇಲಾಧಿಕಾರಿಗಳು ಮುಂದಿನ ವಾರ್ಡ್ ಸಭೆಯಲ್ಲಿ ಹಾಜರಿರುವಂತೆ ಕ್ರಮವಹಿಸಲು ಕೋರಿದರು.
   4. ಆರೋಗ್ಯಧಿಕಾರಿಯವರು ಕೋರೊನಾ ಸೊಂಕು ತಡೆಗಟ್ಟಲು ಮುಂಜಾಗ್ರತ ಕ್ರಮವಾಗಿ ಹಾಗೂ ಕರೋನಾ ಸೊಂಕಿನ ಗುಣಲಕ್ಷಣಗಳೂ ಕಂಡು ಬಂದಲ್ಲಿ ಜನಸಾಮಾನ್ಯರು ತಾವೇ



Scanned with CamScanner

ತೆಗೆದುಕೊಳ್ಳಬಹುದಾದ ಕೆಲವು ಮುಂಜಾಗ್ರತ ಕ್ರಮಗಳು, ಔಷದಿ, ಮಾತ್ರೆಗಳ ಪಟ್ಟಿ ಬಗ್ಗೆ ವಾರ್ಡ್ ನಂ. 06ರ ವಾಟ್ಸ್ ಆಪ್ ಗ್ರೂಪ್‌ಗೆ ಹಾಕಲು ಕೋರಿದರು.

6. **ಶ್ರೀ ವಿನೋದ್, ಶಬರಿನಗರ** ರವರು ಮಾತನಾಡಿ
   1. ಶಬರಿನಗರದಲ್ಲಿ ಆರ್ಚ್ ಹತ್ತಿರ ರಸ್ತೆ ಗುಂಡಿ ಬಿದಿದ್ದು ಸರಿಪಡಿಸುವಂಥೆ ಕೋರಿದರು.
   2. ಶಬರಿನಗರದಲ್ಲಿ ಘನತ್ಯಾಜ್ಯ ನಿರ್ವಹಣೆಯನ್ನು ಸಮರ್ಪಕವಾಗಿ ನಿರ್ವಹಿಸಲು ಕೋರಿದರು ಈ ಬಗ್ಗೆ ನೊಡೆಲ್ ಅಧಿಕಾರಿಗಳೂ ಕೂಡಲೇ ಕ್ರಮ ವಹಿಸುವಂತೆ ಆರೋಗ್ಯ ಶಾಖೆ ಅಧಿಕಾರಿಗಳಿಗೆ ಸೂಚಿಸಿದರು.
   3. ಕುಡಿಯುವ ನೀರಿನ ಸರಬರಾಜುಗಾಗಿ ಒಂದು ಹೊಸದಾಗಿ ಕೊಳವೆ ಬಾವಿಯನ್ನು ಕೊರೆಸಿಕೊಡುವಂಥೆ ಕೋರಿದರು.
7. **ಶ್ರೀ ರವಿಂದ್ರ, ಎಂ.ಎಸ್.ಆರ್ ನಾರ್ಥ್‌ಸಿಟಿ ಬಡಾವಣೆ ರವರು ಮಾತನಾಡಿ** ಬಡಾವಣೆಗಳಲ್ಲಿ ಹೊಸದಾಗಿ ಅಡಿಗಾಲುವೆಗಳನ್ನು ನಿರ್ಮಿಸಿಕೊಡಲು ಕೋರಿದರು ಈ ಬಗ್ಗೆ ಸ.ಅ ರವರು ಮಾತನಾಡಿ ಮುಂದೆ ಬರುವ ಅನುದಾನದಲ್ಲಿ ಅಡಿಗಾಲುವೆಗಳನ್ನು ನಿರ್ಮಿಸಲು ಕ್ರಮ ವಹಿಸಲಾಗುವುದು ಎಂದು ಸಭೆಗೆ ತಿಳಿಸಿದರು.

ಕೊನೆಯದಾಗಿ ಮಾನ್ಯ ನೋಡೆಲ್ ಅಧಿಕಾರಿಗಳು, ವಾರ್ಡ್ ಸಮಿತಿ ರವರು ಮಾತನಾಡಿ ಈವರೆವಿಗೂ ಸಭೆಯಲ್ಲಿ ಚರ್ಚಿಸಿರುವ ಎಲ್ಲಾ ವಿಷಯಗಳನ್ನು ಗಂಬೀರವಾಗಿ ಪರಿಗಣಿಸಿ ಎಲ್ಲಾ ದೂರು ಸಲಹೆ ಮತ್ತು ಸೂಚನೆಗಳನ್ನು ಕಾರ್ಯರೂಪಕ್ಕೆ ತರಲು ಕಾರ್ಯೋನ್ಮುಖರಾಗುವಂತೆ ಸಭೆಯಲ್ಲಿ ಹಾಜರಿದ್ದ ಎಲ್ಲಾ ಇಲಾಖಾ ಅಧಿಕಾರಿಗಳಿಗೆ ಸೂಚಿಸುತ್ತಾ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

05/12/2020

ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು
ವಾರ್ಡ್‌ಸಮಿತಿ, ವಾರ್ಡ್ ನಂ. 06(ಥಣಿಸಂಧ್ರ)

ನೋಡೆಲ್ ಅಧಿಕಾರಿಗಳು
ವಾರ್ಡ್ ಸಮಿತಿ, ವಾರ್ಡ್ ನಂ. 06, (ಥಣಿಸಂಧ್ರ)

ಪ್ರತಿಯನ್ನು.

1. ಕೌನ್ಸಿಲ್ ಕಾರ್ಯದರ್ಶಿ, ಬಿಬಿಎಂಪಿ ಕೇಂದ್ರಕಛೇರಿ, ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಜಂಟಿಆಯುಕ್ತರು, ಯಲಹಂಕ ವಲಯರವರಿಗೆ ಅವಗಾಹನೆಗೆ ಸಲ್ಲಿಸಿದೆ.
3. ಮುಖ್ಯಅಭಿಯಂತರರು, ಯಲಹಂಕ ವಲಯರವರಿಗೆ ಅವಗಾಹನೆಗೆ ಸಲ್ಲಿಸಿದೆ.
4. ಕಂದಾಯ ಅಧಿಕಾರಿಗಳು (ಯಲಹಂಕ) ಬೆಂಗಳೂರು ರವರ ಅವಗಾಹನೆಗೆ ಸಲ್ಲಿಸಿದೆ.
5. ಕಾರ್ಯಪಾಲಕಅಭಿಯಂತರರು, ಬ್ಯಾಟರಾಯನಪುರ ವಿಭಾಗರವರಿಗೆ ಸಲ್ಲಸಿದೆ
6. ಕಛೇರಿಕಡತಕ್ಕೆ.

Scanned with CamScanner